ಶಿವಮೊಗ್ಗ ನಗರಸಭೆ ವ್ಯಾಪ್ತಿಯಲ್ಲಿ ಕಟ್ಟಲಾಗಿರುವ ಅನಧಿಕೃತ ಮನೆಗಳನ್ನು ಸಕ್ರಮಗೊಳಿಸುವುದು.

220(2500)

ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಅನೇಕ ವರ್ಷಗಳಿಂದ ನಗರಸಭೆ ಜಾಗದಲ್ಲಿ ಅನಧಿಕೃತ ಮನೆ ಕಟ್ಟಿಕೊಂಡಿರುವ ಬಡವರಿಗೆ ಸಕ್ರಮಗೊಳಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; ಏವರ ನೀಡುವುದು;

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಳ್ಳುವ ಕ್ರಮವೇನು?

ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು):

ಅ) ಹೌದು.

ಆ) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರ ಸರಿ. ಆದರೆ ನಗರಸಭೆ ವ್ಯಾಪ್ತಿಯಲ್ಲಿ ಲಕ್ಷಾನ್ಯೂ ನಿವೇಶನಗಳು ಬಹಳ ಇವೆ. ಆ ಭಾಗದ ಜನರಿಂದ ನಾವು ಹೆಚ್ಚಿಗೆ ಹಣ ನಿರೀಕ್ಷೆ ಮಾಡದೆ ಕಡಿಮೆ ದರದಲ್ಲಿ ಅವರಿಂದ ಹಣ ಪಡೆದು ಅವರಿಗೆ ಪಟ್ಟಾ ವಿತರಣೆ ಮಾಡಿ ಖಾತೆಯನ್ನು ಮಾಡಿಕೊಡಬೇಕು. ಇದರಿಂದ ಲಕ್ಷಾಂತರ ರೂಪಾಯಿಗಳ ಹಣ ನಗರಸಭೆಗೆ ಬರುತ್ತದೆ. ಇದು ಬಹಳ ವರ್ಷಗಳಿಂದ ಇರತಕ್ಕಂಥ ಯೋಜನೆ. ನಗರಸಭೆ ದಿನೇ ದಿನೇ ದೊಡ್ಡದಾಗುತ್ತಾ ಬರುತ್ತಿದೆ. ಅಲ್ಲಿನ ನಾಗರೀಕರಿಗೆ ನಾವು ಎಲ್ಲಾ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆ. ನೀರು, ರಸ್ತೆ ಚರಂಡಿ ಎಲ್ಲವನ್ನೂ ಕೊಟ್ಟಿದ್ದೇವೆ. ಇದು ಬಹಳ ಮುಖ್ಯವಾದ ಅಂಶ. ಸರ್ಕಾರ ಈ ಬಗ್ಗೆ ಗಮನಹರಿಸಬೇಕು. ಜೊತೆಗೆ 1982ನೇ ಇಸವಿಯಲ್ಲಿ ಪ್ರವಾಹ ಬಂದಾಗ ಆ ಭಾಗದ ಜನರಿಗೆ ನಾವು ಹೊಸದಾಗಿ ನಿವೇಶನಗಳನ್ನು ಮಾಡಿಕೊಟ್ಟರೂ ಸಹ ನಗರಸಭೆಯಿಂದ ಪಟ್ಟಾ ಕೊಟ್ಟು ಖಾತಾ ಮಾಡಿ ಕೊಟ್ಟಿಲ್ಲ. ಆದ್ದರಿಂದ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಆದೇಶ ಕೊಟ್ಟು ತಕ್ಷಣ ಪಟ್ಟಾ ಕೊಟ್ಟು ಖಾತಾ ಮಾಡಿ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ಸಚಿವರು): ಮಾನ್ಯ ಅಧ್ಯಕ್ಷರೇ,

ಮಾನ್ಯ ಸದಸ್ಯರ ಕಳಕಳಿ ಏನು ಇದೆ ಅದು ನನಗೆ ಗೊತ್ತಿದೆ. ಈ ಒಂದು ನಗರಸಭೆ ವ್ಯಾಪ್ತಿಯಲ್ಲಿರುವ ನಿವೇಶನಗಳು ರೆವಿನ್ಯೂ ಇಲಾಖೆ ವ್ಯಾಪ್ತಿಯಲ್ಲಿ ಬರುತ್ತದೆ. ಅವರು ಹೇಳಿದಂತೆ ನಾಗರೀಕರು ರೆವಿನ್ಯೂ ನಿವೇಶನಗಳಲ್ಲಿ ಕಟ್ಟಡಗಳನ್ನು ಕಟ್ಟಿದ್ದಾರೆ. ಆ ಬಗ್ಗೆ ನಾನು ಸವಿಸ್ತಾರವಾದ ವರದಿಯನ್ನು ತರಿಸಿಕೊಂಡು ಅಲ್ಲಿ ಮನೆಗಳನ್ನು ನಾಗರೀಕರು ಏನು ಕಟ್ಟಿದ್ದಾರೆ. ಅದನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲನೆ ಮಾಡಿ ಅವರಿಗೆ ಅನುಕೂಲ ಮಾಡಿಕೊಡುತ್ತೇನೆ.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿನ ರೇಷ್ಮೆ ಫಾರಂಗಳ ಕಾರ್ಯ ನಿರ್ವಹಣೆ.

221(2475)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕೃಷಿ ಇಲಾಖೆಯ ರೇಷ್ಮೆ ಫಾರಂಗಳು ಎಷ್ಟಿವೆ? ಅವುಗಳಲ್ಲಿ ಲಾಭದಲ್ಲಿರುವುದೆಷ್ಟು; ನಷ್ಟದಲ್ಲಿ ಇರುವುದೆಷ್ಟು?

ಆ) ಕಳೆದ ಒಂದು ವರ್ಷ ಅವಧಿಯಲ್ಲಿ ಈ ಫಾರಂಗಳಲ್ಲಿ ಎಷ್ಟು ಜನರಿಗೆ ತರಬೇತಿ ನೀಡಲಾಗಿದೆ. ನಷ್ಟದಲ್ಲಿರುವ ರೇಷ್ಮೆ ಫಾರಂಗಳನ್ನು ಖಾಸಗಿಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಇ) ಇದ್ದಲ್ಲಿ ಈ ನಿಟ್ಟಿನಲ್ಲಿ ಹಾಕಿಕೊಳ್ಳಲಾಗಿರುವ ಯೋಜನೆ ಏನು?

ಈ) ವಯಸ್ಕರಿಗೆ ರೇಷ್ಮೆ ಫಾರಂಗಳಲ್ಲಿ ತರಬೇತಿಯನ್ನು ನೀಡಲು ಯಾವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ?

ಶ್ರೀ ಎಂ.ಮಹಾದೇವ್ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ರೇಷ್ಮೆ ಕೃಷಿ ಕ್ಷೇತ್ರಗಳು : 13

ಎಲ್ಲಾ ರೇಷ್ಮೆ ಕೃಷಿ ಕ್ಷೇತ್ರಗಳು ನಷ್ಟದಲ್ಲಿ ನಡೆಯುತ್ತಿವೆ.

ಆ)) ರೇಷ್ಮೆ ಕೃಷಿ ಕ್ಷೇತ್ರ ತಾಂಡವಪುರದ ಮಹಿಳಾ ಪ್ರಾತ್ಯಕ್ಷತಾ ಕೇಂದ್ರದಲ್ಲಿ 165 ಮಹಿಳಾ ರೇಷ್ಮೆ ಬೆಳೆಗಾರರಿಗೆ ತರಬೇತಿ ನೀಡಲಾಗಿದೆ. ರೇಷ್ಮೆ ಕೃಷಿ ಕ್ಷೇತ್ರಗಳ ಅಭಿವೃದ್ಧಿ